ಬಾಗೇಪಲ್ಲಿ	...	೮
ಗುಡಿಬಂಡೆ	...	೪
ಗೌರೀಬಿದನೂರು	...	೫
ಒಟ್ಟು		೧೭

ಮೆಲ್ಕಂಡ ತಾಲೂಕುಗಳಲ್ಲಿ ಒಟ್ಟು ೨೧ ಶಿಕ್ಷಕರ ಹುದ್ದೆಗಳು ಖಾಲಿ ಇವೆ.

(ಆ) ಶಿಕ್ಷಕರ ಕೊರತೆಯಿಂದಾಗಿ ತುಂಬಲು ಸಾಧ್ಯವಾಗುತ್ತಿಲ್ಲ.

(ಇ) ಸರ್ಕಾರಿ ಪತ್ರ ಸಂಖ್ಯೆ ಇಡಿ ೩೭ ಡಿಪಿಐ ೮೩, ದಿನಾಂಕ ೩೦ನೇ ಆಗಸ್ಟ್ ೧೯೮೩ರ ಪ್ರಕಾರ ಎಲ್ಲಾ ವಿಭಾಗೀಯ ಸಹ ನಿರ್ದೇಶಕರಿಗೆ ಒಪ್ಪಂದದ ಆಧಾರದ ಮೇರೆಗೆ ಪ್ರಾಥಶಾಲಾ ಸಹ ಶಿಕ್ಷಕರಾಗಿ ಕೆಲಸ ಮಾಡಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಶಿಕ್ಷಣ ಆಯುಕ್ತರು ದಿನಾಂಕ ೩ನೇ ಸೆಪ್ಟೆಂಬರ್ ೧೯೮೩ರಲ್ಲಿ ತಿಳಿಸಿದ್ದಾರೆ.

ಮೊಳಕಾಲ್ಮೂರು ಕ್ಷೇತ್ರದಲ್ಲಿ ರಿಗ್ ಬೋರ್‌ಗಳನ್ನು ಆಳವಡಿಸುವ ಬಗ್ಗೆ

೨೪೫. ಶ್ರೀ ಎನ್. ಜಿ. ನಾಯಕ (ಮೊಳಕಾಲ್ಮೂರು) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ?

(ಅ) ಮೊಳಕಾಲ್ಮೂರು ಕ್ಷೇತ್ರದಲ್ಲಿ ಜನವರಿ ತಿಂಗಳಿಂದ ಜುಲೈ ತಿಂಗಳು ೧೯೮೩ನೇ ಇಸವಿಯಲ್ಲಿ ಎಷ್ಟು ರಿಗ್ ಬೋರ್‌ಗಳನ್ನು ಆಳವಡಿಸಲಾಗಿದೆ. ಇವುಗಳಲ್ಲಿ ಎಷ್ಟು ಸರಿಯಾಗಿರುತ್ತದೆ. ಹಾಗೂ ಎಷ್ಟು ಕೆಟ್ಟುಹೋಗಿರುತ್ತದೆ.

(ಆ) ಈ ರಿಗ್ ಬೋರ್ ಬಾವಿಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ.

(ಇ) ಅವುಗಳನ್ನು ತೆಗೆಸಿದ ಮೇಲೆ ಮೇಲಿನ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳು ಕುಡಿಯುವ ನೀರಿನಿಂದ ತೊಂದರೆಯಲ್ಲಿರುತ್ತದೆ ಮತ್ತು ಸರ್ಕಾರದವರ ಮುಂದಿನ ಕ್ರಮಗಳೇನು ?

(ಈ) ಈಗ ಆಳವಡಿಸಿದ ರಿಗ್‌ಗಳಿಗೆ ಕೈ ಪಂಪು ಹಾಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಮತ್ತು ಇವುಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರು).—(ಅ) ಮೊಳಕಾಲ್ಮೂರು ಕ್ಷೇತ್ರದಲ್ಲಿ ಒಟ್ಟು ೬೮ ಕೊಳವೆ ಬಾವಿಗಳನ್ನು ತೋಡಲಾಗಿದು ಅದರಲ್ಲಿ ೬೨ ಯಶಸ್ವಿಯಾಗಿರುತ್ತೆ ಮತ್ತು ೬ ವಿಫಲವಾಗಿದೆ.

(ಆ) ರೂ. ೮,೬೪,೩೯೮ ಗಳು ಖರ್ಚಾಗಿದೆ.

(ಇ) ೨೭ ಹಳ್ಳಿಗಳಲ್ಲಿ ಈಗ ಹಾಳಿ ತೋಡಿರುವ ಕೊಳವೆ ಬಾವಿಗಳ ಮುಖಾಂತರ ಒದಗಿಸುತ್ತಿರುವ ಕುಡಿಯುವ ನೀರು ಸಾಲದಾಗಿದೆ. ಈ ಹಳ್ಳಿಗಳಿಗೆ ಕುಡಿಯುವ ನೀರಿನ ಕೊರತೆಯನ್ನು ಬಗೆಹರಿಸಲು ೧೯೮೩–೮೪ನೇ ಸಾಲಿನಲ್ಲಿ ಬರ ನಿವಾರಣೆ ಯೋಜನೆಯಲ್ಲಿ ೧೩ ಹಳ್ಳಿಗಳಿಗೆ ಹೆಚ್ಚುವರಿ ಕೊಳವೆ ಬಾವಿಗಳನ್ನು ಹಾಕಲು ಹಾಗೂ ೧೯೮೪-೮೫ನೇ ಸಾಲಿನಲ್ಲಿ ಇನ್ನುಳಿದ ೨೧ ಗ್ರಾಮಗಳಿಗೆ ಹೆಚ್ಚುವರಿ ಕೊಳವೆ ಬಾವಿಗಳನ್ನು ತೋಡುವ ಯೋಜನೆಯನ್ನು ಜಿಲ್ಲಾಭಿವೃದ್ಧಿ ಮಂಡಳಿಗೆ ಕಳುಹಿಸಲಾಗಿದೆ. ಅನುಮೋದನೆಯ ನಂತರ ಈ ೩೭ ಗ್ರಾಮಗಳಿಗೆ ಹೆಚ್ಚುವರಿ ಕೊಳವೆ ಬಾವಿಗಳನ್ನು ತೋಡಲು ಪ್ರಯತ್ನಿಸಲಾಗುವುದು.

(ಈ) ೬೨ ಯಶಸ್ವಿಯಾದ ಕೊಳವೆ ಬಾವಿಗಳ ಪೈಕಿ ೪೭ ಬಾವಿಗಳಿಗೆ ಕೈಪಂಪುಗಳನ್ನು ಆಳವಡಿಸಲಾಗಿದೆ, ಇನ್ನು ಉಳಿದ ೧೫ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಶೀಘ್ರವೆ ಹಾಕಲಾಗುವುದು.

ಸಂಸ್ಕೃತ ಪರೀಕ್ಷೆ ನಡೆಸುವಲ್ಲಿನ ಅವ್ಯವಸ್ಥೆ ಕುರಿತು

೨೪೯. ಶ್ರೀ ವಿ. ಎಸ್. ಆಚಾರ್ಯ (ಉಡುಪಿ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕ ಪೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಸಂಸ್ಕೃತ ಪರೀಕ್ಷೆಗಳು ಇತರ ಎಲ್ಲಾ ಪರೀಕ್ಷೆಗಳಿಗಿಂತ ಬೇಗನೆ ನಡೆದರೂ ಪರಿಣಾಮ ಪ್ರಕಟಣೆಯಲ್ಲಿ ಹಾಗೂ ಅಂಕಪಟ್ಟಿಗಳನ್ನು

ನೀಡುವಲ್ಲಿ ಮತ್ತು ಅಸಮರ್ಪಕ ಪ್ರಶ್ನೆ ಪತ್ರಿಕೆಗಳಿಂದಾಗಿ ಆಗಿರುವ ಅವ್ಯವಸ್ಥೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) —

(ಅ) ಫಲಿತಾಂಶ ಪ್ರಕಟನೆ ಮತ್ತು ಅಂಕಪಟ್ಟಿ ನೀಡುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಒಂದೇ ಒಂದು ಸಂಸ್ಥೆಯಲ್ಲಿ ಮಾತ್ರ ಗೊತ್ತುಪಡಿಸಿದ ಪಠ್ಯಪುಸ್ತಕ ಬೋಧಿಸಲ್ಪಡದಿದ್ದರಿಂದ ಕೇವಲ ಇಬ್ಬರು ವಿದ್ಯಾರ್ಥಿಗಳಿಗೆ ಅನಾನುಕೂಲವಾದುದು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಈ ವಿಷಯದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಿದೆ.

ಹೊಸನಗರ ತಾಲ್ಲೂಕು ವ್ಯವಸಾಯ ಇಲಾಖೆಯಿಂದ ವಿಶೇಷ ಘಟಕ ಯೋಜನೆಯಿಂದ ಹಂಚಲಾದ ನೇಗಿಲು, ಗುದ್ದಲಿ ಮಂತಾದುವುಗಳ ಹಂಚಿಕೆ ಬಗ್ಗೆ

೨೧೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವ್ಯವಸಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಹೊಸನಗರ ತಾಲ್ಲೂಕು ವ್ಯವಸಾಯ ಇಲಾಖೆಯಿಂದ ಸ್ಪೆಷಲ್ ಕಾಂಪೊನೆಂಟ್ ಸ್ಕೀಮಿನಲ್ಲಿ ಹಂಚಲಾದ ನೇಗಿಲು, ಗುದ್ದಲಿ, ಸ್ಪೇಯರ್ ಮತ್ತು ಪಿಕಾಸಿಗಳನ್ನು ಯಾವ ಧಾರಣೆಗೆ ಕೊಂಡು ಹಂಚಲಾಗಿದೆ.

(ಆ) ಸದರಿ ಸಾಮಾನುಗಳು ಪಡೆದವರ ಬಳಿ ಇವೆಯೆ.

(ಇ) ಇದರ ಬಗ್ಗೆ ತನಿಖೆ ನಡೆಸುವಂತೆ ಬರೆದ ಅರ್ಜಿಗಳ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ ?

ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).—

(ಅ) ವಿಶೇಷ ಘಟಕ ಯೋಜನೆಯಲ್ಲಿ ಹೊಸನಗರ ತಾಲ್ಲೂಕಿನಲ್ಲಿ ೧೯೮೨–೮೩ರಲ್ಲಿ ಈ ಕೆಳಕಂಡ ಕೃಷಿ ಉಪಕರಣಗಳನ್ನು ಕೊಂಡು ಹಂಚಲಾಗಿದೆ.

(೧)	ನೇಗಿಲು ಒಂದಕ್ಕೆ	೧೫೦–೦೦ ರೂಪಾಯಿಗಳು
(೨)	ಗುದ್ದಲಿ ಒಂದಕ್ಕೆ	೩೧–೫೦ ,,
(೩)	ಸ್ಪೇಯರ್ ಒಂದಕ್ಕೆ	೩೬೪–೬೫ ,,
(೪)	ಪಿಕಾಸಿ ಒಂದಕ್ಕೆ	೩೭–೦೦ ,,

(ಆ) ಹಂಚಿರುವ ಉಪಕರಣಗಳು ಪಡೆದವರ ಬಳಿ ಇವೆ.

(ಇ) ಜಾಗೃತಾ ಆಯೋಗದವರು ತನಿಖೆ ನಡೆಸಿದ್ದು ಇನ್ನು ತನಿಖೆ ವರದಿ ಬಂದಿಲ್ಲ.

ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಸಂಖ್ಯೆ

೨೩೨. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ಉತ್ತರಿಸುವರೇ ?

(ಅ) ಸರ್ಕಾರದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾಲೇಜುವಾರು ೧೯೮೨–೮೩ರಲ್ಲಿ ಸೇರಿಸಲ್ಪಟ್ಟ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು.

(ಆ) ಕಾಲೇಜುವಾರು ಮಾಹಿತಿ ಹಾಗೂ ಯಾವ ಯಾವ ಜಾತಿಯವರು ಎಷ್ಟೆಷ್ಟು ಜನರಿದ್ದಾರೆ ಎಂಬ ವಿವರಗಳನ್ನು ಒದಗಿಸುವುದು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಲಗತ್ತಿಸಿರುವ ಅನುಬಂಧದಲ್ಲಿ ಕೊಟ್ಟಿದೆ.

(ಆ) ನಿಗದಿಪಡಿಸಿರುವ ಅಪ್ಲಿಕೇಷನ್ ಫಾರಂನಲ್ಲಿ ವಿದ್ಯಾರ್ಥಿಗಳು ಯಾವ ಜಾತಿಗೆ ಸೇರಿದ್ದಾರೆ ಎಂದು ತಿಳಿಸಬೇಕಾಗಿಲ್ಲದಿರುವುದರಿಂದ ಜಾತಿವಾರು ಸಂಖ್ಯೆ ಒದಗಿಸಲು ಸಾಧ್ಯವಿಲ್ಲ. ಆದರೆ ವಿವಿಧ ವರ್ಗಗಳಲ್ಲಿ ಕಾಲೇಜುವಾರು ಎಷ್ಟೆಷ್ಟು ವಿದ್ಯಾರ್ಥಿಗಳನ್ನು ಸೇರಿಸಿವೆ ಎಂದು ಲಗತ್ತಿಸಿರುವ ಅನುಬಂಧದಲ್ಲಿ ಕೊಟ್ಟಿದೆ.